"ಹೌದು. ಅವ್ನ ತಾಯಿ ಇದ್ದಾರೆ. ಇನ್ನು ಬೇರೆ ಯಾರಿದ್ದಾರೋ ಗೊತ್ತಿಲ್ಲ. ಉತ್ತಯ್ಯ ಬಂದ ಮೇಲೆ ಎಲ್ಲಾ ತಿಳಿಯಬಹುದು."

"ಉತ್ತಯ್ಯ ಯಾರು?"

"ಸೋಮಯ್ಯನ ಜೂನಿಯರ್ ವಕೀಲ. ಇವ್ನ ಜೊತೆ ಹದಿನೈದು ವರ್ಷಗಳಿಂದ ಇದ್ದಾನೆ. ಇನ್ನೂ ಸೀನಿಯರ್ ಆಗಿ ಕೆಲ್ಸ ಮಾಡೋ ಯೋಗ್ಯತೆ ಇರದವ್ನು. ಬಿಟ್ಟಂಗಾಲಕ್ಕೆ ಹೋಗಿದ್ದಾನಂತೆ. ಅವ್ನಿಗೆ ವಿಷ್ಯ ತಿಳ್ಸಿದೆ..."

ಕರಮಚಂದನ ಗಮನ ಸೋಮಯ್ಯನ ಮೇಜಿನ ಅಂಚಿನಲ್ಲಿದ್ದ ಗಣಕಯಂತ್ರದ ಪರದೆಯ ಮೇಲೆ ಸರಿಯಿತು. ಗಣಕಯಂತ್ರವು ಚಾಲೂ ಸ್ಥಿತಿಯಲ್ಲಿತ್ತು. ಮೌಸ್ ಮುಟ್ಟಿದೊಡನೆ ಪರದೆ ಮೇಲೆ ಬೆಳಕು ಮೂಡಿತು. ಕರಮಚಂದ ಆಸ್ಥೆಯಿಂದ ಅದರ ಮೇಲೆ ನಜರು ಓಡಿಸಿದ. ನಾನು ಸೋಮಯ್ಯನ ಹಿಂದಿದ್ದ ಷೋಕೇಸಿನಲ್ಲಿರಿಸಿದ ಪುಸ್ತಕಗಳತ್ತ ದಿಟ್ಟಿ ಹಾಯಿಸಿದೆ. ಅದರ ಪಕ್ಕದಲ್ಲಿ ಕಪಾಟಿನಲ್ಲಿ ಫೈಲುಗಳನ್ನು ಓರಣವಾಗಿ ಜೋಡಿಸಿಡಲಾಗಿತ್ತು. ನನ್ನ ದೃಷ್ಟಿ ಕೆಳಗೆ ಸರಿದಾಗ, ಒಂದು ವಿಚಿತ್ರ ಗಮನಿಸಿದೆ... ಕೆಳಗಿನ ಅರೆಯಲ್ಲಿದ್ದ ಕೆಲವು ಫೈಲುಗಳು ಅಡ್ಡಾದಿಡ್ಡಿಯಾಗಿದ್ದವು! ನಾನು ಅದನ್ನು ಕರಮಚಂದನಿಗೆ ಹೇಳಬೇಕೆನ್ನುವಷ್ಟರಲ್ಲಿ ಬಾಗಿಲು ತೆರೆದು, ಪೇದೆಯು ಒಬ್ಬ ವ್ಯಕ್ತಿಯೊಂದಿಗೆ ಆಗಮಿಸಿದ. ಗಾಢ ಮೈಬಣ್ಣದ, ತೆಳ್ಳಗಿನ ನೀಳಕಾಯದ ಆಸಾಮಿ ಬಿಸಿಲಿನಲ್ಲಿ ಬಂದು ಬೆವರಿದ್ದು ಹಣೆಯಲ್ಲಿ ನಿಚ್ಚಳವಾಗಿ ಕಾಣಿಸುತ್ತಿತ್ತು. ಆತ ಉತ್ತಯ್ಯನಿರಬೇಕೆಂಬ ನನ್ನ ಊಹೆ ಹುಸಿಯಾಗಲಿಲ್ಲ. ಸೋಮಯ್ಯನನ್ನು ಕಂಡೊಡನೆ ಆತ ಮೊಗವನ್ನು ಕೈಗಳಿಂದ ಮುಚ್ಚಿ ಬಿಕ್ಕಳಿಸಿದ. ತುಸು ಹೊತ್ತು ಅದೇ ಸ್ಥಿತಿಯಲ್ಲಿದ್ದ ಆತ ನಂತರ ತುಸು ಸಾವರಿಸಿಕೊಂಡ. ಡಿಸೋಜ ಆತನೊಡನೆ ಮಾತಿಗಾರಂಭಿಸಿದ.

ಡಿಸೋಜನ ಕ್ಷಿಪ್ರ ತನಿಖೆ ಉತ್ತಯ್ಯನಿಂದ ಕೆಲವು ಮಾಹಿತಿಗಳನ್ನು ಪಡೆಯಲು ನೆರವಾಯಿತು. ಸೋಮಯ್ಯನ ಡೈರಿಯನ್ನು ತೋರಿಸಿದ ಉತ್ತಯ್ಯ ಆ ದಿನ ಮೂವರು ಕಕ್ಷಿಗಾರರಿಗೆ ಸಂದರ್ಶನಕ್ಕೆ ಅವಕಾಶ ನೀಡಲಾಗಿತ್ತೆಂದು ಹೇಳಿದ. ಹತ್ತೂವರೆಗೆ ಬೆಲ್ಲಚಂಡ ಬೆಟ್ಟಪ್ಪ, ಹನ್ನೊಂದು ಗಂಟೆಗೆ ಐಚಂಡ ಪಾಲಯ್ಯ ಮತ್ತು ಕೊನೆಯದಾಗಿ ಹನ್ನೆರಡು ಗಂಟೆಗೆ ರುದ್ರಮುನಿ ಅನ್ನುವವನಿಗೆ ಅಪಾಯಿಂಟ್‌ಮೆಂಟ್ ನೀಡಿದ್ದ ಸೋಮಯ್ಯ. ಬೆಟ್ಟಪ್ಪನ ಮೇಲೆ ಕೊಲೆಯ ಆಪಾದನೆಯಿದ್ದು, ಜಾಮೀನಿನ ಮೇಲೆ ಹೊರಬಂದಿದ್ದ. ಆದರೆ ಸಾಕ್ಷ್ಯಗಳೆಲ್ಲವೂ ಆತನಿಗೆ ವಿರುದ್ಧವಾಗಿದ್ದರಿಂದ, ಬೆಟ್ಟಪ್ಪನಿಗೆ ಕೋರ್ಟಿನಲ್ಲಿ ಹಿನ್ನಡೆಯಾಗಿತ್ತು. ಇದರಿಂದ ಕೆರಳಿದ್ದ ಬೆಟ್ಟಪ್ಪ ಕಳೆದ ವಾರವಷ್ಟೇ ಸೋಮಯ್ಯನೊಡನೆ ಗಲಾಟೆ ಮಾಡಿದ್ದನಂತೆ. ರುದ್ರಮುನಿಯೂ ಜಾಮೀನು ಗಿರಾಕಿಯೇ. ಆತನ ಮೇಲೆ ಅತ್ಯಾಚಾರ ಮತ್ತು ಕೊಲೆಯ ಆಪಾದನೆಯಿತ್ತು. ಕೊಟ್ಟಮುಡಿಯ ಪುಷ್ಪವಲ್ಲಿ ಎಂಬಾಕೆಯ ಮೇಲೆ ಅತ್ಯಾಚಾರವೆಸಗಿ, ಕೊಲ್ಲಲು ಯತ್ನಿಸಿದ ಆರೋಪ. ಆದರೆ ಪಾಲಯ್ಯನ ಬಗ್ಗೆ ಉತ್ತಯ್ಯನಿಗೆ ಮಾಹಿತಿ ಇರಲಿಲ್ಲ. ಆತ ಹೊಸ ಕಕ್ಷಿಗಾರನಾಗಿದ್ದು, ನೇರವಾಗಿ ಸೋಮಯ್ಯನನ್ನು ಸಂಪರ್ಕಿಸಿ, ಸಂದರ್ಶನ ನಿಗದಿ ಮಾಡಿಕೊಂಡಿದ್ದ. ಡೈರಿಯಲ್ಲಿ ಅದನ್ನು ಸೋಮಯ್ಯನೇ ನಮೂದಿಸಿದ್ದನ್ನು ಉತ್ತಯ್ಯ ತೋರಿಸಿದ. ಉಳಿದವುಗಳೆರಡೂ ಬೇರೆ ಹಸ್ತಾಕ್ಷರದಲ್ಲಿದ್ದವು. ಆದರೂ ಪಾಲಯ್ಯನ ಕುರಿತು ಉತ್ತಯ್ಯ ಒಂದು ಅನುಮಾನ ಹೊರಚೆಲ್ಲಿದ... ರುದ್ರಮುನಿಗೂ, ಪಾಲಯ್ಯನಿಗೂ ನಂಟು ಇರುವ ಸಾಧ್ಯತೆಯಿದೆ! ಯಾಕೆಂದರೆ ಪುಷ್ಪವಲ್ಲಿಯ ಗಂಡನ ಹೆಸರೂ ಪಾಲಯ್ಯ! ಆದರೆ ಒಂದೇ ವ್ಯತ್ಯಾಸ... ಪುಷ್ಪವಲ್ಲಿಯ ಗಂಡ ಕೊಟ್ಟಮುಡಿಯವನು. ಆದರೆ ಈ ಪಾಲಯ್ಯ ಬಿಟ್ಟಂಗಾಲದವನು ಅಂತ ಸೋಮಯ್ಯ ಹೇಳಿದ್ದನಂತೆ! ಹೆಚ್ಚಾಗಿ ಭಾನುವಾರ ಸೋಮಯ್ಯ ಕಚೇರಿಗೆ ಬರುವುದು ಕಡಿಮೆಯೆಂದೂ, ಅಪಾಯಿಂಟ್‌ಮೆಂಟ್ ಇದ್ದಲ್ಲಿ ಮಾತ್ರ ಬರುತ್ತಿದ್ದನೆಂದೂ ತಿಳಿಯಿತು. ಆ ದಿನ ವೈಯಕ್ತಿಕ ಕೆಲಸವಿದ್ದುದರಿಂದ ತಾನು ಕಚೇರಿಗೆ ಬಂದಿರಲಿಲ್ಲವೆಂತಲೂ ಉತ್ತಯ್ಯ